ಯೋಜನೆಯಡಿಯಲ್ಲಿ 1637 ಮನೆಗಳ ಗುರಿ ನಿಗದಿಪಡಿಸಲಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ನೀಡಲಾದ ಗುರಿ	
		ಗ್ರಾಮೀಣ ಆಶ್ರಯ	ಇಂದಿರಾ ಆವಾಸ್
1	ನೆಲಮಂಗಲ	1320	220
2	ಮಾಗಡಿ	1920	215
3	ಹೊಸಕೋಟೆ	1560	214
4	ದೊಡ್ಡಬಳ್ಳಾಪುರ	1740	213
5	ಚನ್ನಪಟ್ಟಣ	1920	131
6	ಕನಕಪುರ	2580	184
7	ರಾಮನಗರ	1440	163
8	ದೇವನಹಳ್ಳಿ	1260	297
	ಒಟ್ಟು	**13740**	**1537**

ನಿವೇಶನ ಯೋಜನೆಯಡಿ ಜಿಲ್ಲಾವಾರು ಗುರಿ ಹೊಂದಲಾಗಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 181 ನಿವೇಶನಗಳ ಗುರಿ ಹೊಂದಲಾಗಿದೆ

, ಇ) ಸರ್ಕಾರ ಹಾಲಿ ನೀಡುತ್ತಿರುವ ರೂ 20000/– ದಲ್ಲಿ ಮನೆ ಕಟ್ಟಲು ಸಾಧ್ಯವಿಲ್ಲ ಆದ್ದರಿಂದ ಸಹಾಯಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

2005–2006ನೇ ಶ್ರೇಣಿಯಡಿ ಘಟಕ ವೆಚ್ಚ ಪ್ರತಿ ಮನೆಗೆ ರೂ 20000/– ದಿಂದ ರೂ 25000/–ಕ್ಕೆ ಮತ್ತು 2006–2007ನೇ ಶ್ರೇಣಿಗೆ ರೂ 30000/–ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರೀಶೀಲನೆಯಲ್ಲಿದೆ

1025 (1233) ಶ್ರೀ ನರಸಿಂಹಸ್ವಾಮಿ ಜಿ (ದೊಡ್ಡಬಳ್ಳಾಪುರ). ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಯಾವ ಭಾಗದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಜಮೀನನ್ನು ಭೂ–ಸ್ವಾಧೀನ ಮಾಡಿಕೊಳ್ಳಲಾಗಿರುತ್ತದೆ

ಆ) ದೊಡ್ಡಬಳ್ಳಾಪುರ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿವೇಶನಗಳನ್ನು ವಿತರಿಸುವುದಾಗಿ ಈ ಹಿಂದೆ ಅರ್ಜಿಗಳನ್ನು ಆಹ್ವಾನಿಸಿದ್ದು ಎಷ್ಟು ಅರ್ಜಿಗಳನ್ನು ವಿತರಿಸಲಾಗಿದೆ,

ಇ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಯಾವುದೇ ಜಮೀನನ್ನು ಭೂ–ಸ್ವಾಧೀನ ಮಾಡಿಕೊಂಡಿರುವುದಿಲ್ಲ

ಆ) ದೊಡ್ಡಬಳ್ಳಾಪುರದಲ್ಲಿ 'ವಸತಿ/ ನಿವೇಶನಗಳಿಗಾಗಿ ಬೇಡಿಕೆಯ ಸಮೀಕ್ಷೆಯನ್ನು ದಿನಾಂಕ 01 08 2006 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದ್ದು ಇದಕ್ಕೆ ಸ್ಪಂದಿಸಿ ಸಾರ್ವಜನಿಕರಿಂದ 5470 ಅರ್ಜಿಗಳು ಸ್ವೀಕೃತವಾಗಿರುತ್ತವೆ

ಇ) ಭೂ–ಸ್ವಾಧೀನ ಪ್ರಕ್ರಿಯೆ ಇನ್ನೂ ಪ್ರಾರಂಭಿಸಿರುವುದಿಲ್ಲ

1026 (1281) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಅತ್ಯಂತ ಹಿಂದುಳಿದಿದ್ದು (ಶೈಕ್ಷಣಿಕವಾಗಿ) ಯಾವುದೇ ವೃತ್ತಿಪರ–ಹಾಗೂ ತಾಂತ್ರಿಕ ವಿದ್ಯಾಲಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಯಾವ ಯಾವ ವೃತ್ತಿಪರ–ಕೋರ್ಸ್‌ನ್ನು ಮಂಜೂರು ಮಾಡಲಾಗುತ್ತಿದೆ,

ಇ) ಹಾಗಿದ್ದಲ್ಲಿ ಎಷ್ಟು ಪ್ರಸ್ತಾವನೆಗಳು ಸರ್ಕಾರದ ಮುಂದಿದೆ, (ಬೀಳಗಿ ತಾಲ್ಲೂಕಿಗೆ ಸಂಬಂಧಿಸಿದಂತೆ ವಿವರ ಒದಗಿಸುವುದು)

ಈ) ಇವುಗಳನ್ನು ಶೈಕ್ಷಣಿಕ ವರ್ಷದಲ್ಲೆ ಮಂಜೂರಾತಿ ಕೊಡಲಾಗುವುದೇ?